ಇನಾಂ ಇಲಾಖಾ.

ಇಸ್ತಿ ಹಾರ್‌ನಾಮೆ.

(ನಂ. 5) ತಾರೀಖು 17—18 ಜನವರಿ 1896.

ಇನಾಂದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ,—ಲೇಟೆ ಅತ್ತಿಕುಪ್ಪ ಹಾಲಿ ಶ್ರೀಕೃಷ್ಣರಾಜಪ್ಯಾಟೆ ತಾಲ್ಲೂಕಿನಲ್ಲಿ. ಇರತಕ್ಕ ಜಿಲ್ಲೆಲೆ ಇನಾಂಗಳಬಾಬತು (618) ಫೈನಲ್ ಟೈಟಲ್ ಡೀಡ್ ಯಾನೆ ಕಾಯಂ ಪಟ್ಟೆಗಳು ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರ ಬಳಿಗೆ ಬಟವಾಡೆ ಬಗ್ಯೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವೆ.

2. ಸದರೀ ತಾಲ್ಲೂಕಿನ ಅಮಲ್‌ದಾರರಿಂದ ಪ್ರತ್ಯೇಕ ಪ್ರತ್ಯೇಕ ನೋಟಿಸ್‌ಗಳು ಬಂದ ಮೇಲೆ ಅವುಗಳನ್ನ ತೆಗದುಕೊಳ್ಳುವ ಬಗ್ಯೆ ಸದರೀ ಇನಾಂದಾರರು ಐರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲದಾರರು ಅಂಥಾ ನೋಟಿಸ್‌ಗಳನ್ನ ದೇರ್ ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

3. ಸದರೀ ಜಿಲ್ಲೆಲೆ ಇನಾಂಗಳ ಬಗ್ಯೆ ಈ ಆಫಿಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾಮಿಯಾ ಪಟ್ಟೆಗಳು ರದ್ದುಮಾಡಲ್ಪಟ್ಟುಯಿರುತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಟ್ಟುಯಿರುತ್ತೆ.

ಜೆ. ಪಿ. ಗ್ರಾಂಟ್,
ಇನಾಂ ಸೂಪರ್‌ಟೆಂಡೆಂಟ್.

ಇಸ್ತಿ ಹಾರ್.

ಕೋಲಾರ ಡಿಸ್ಟ್ರಿಕ್ಟ್ ಫಾರೆಸ್ಟ್ ಇಲಾಖಾ.

ತಾರೀಖು 7ನೇ ಜನವರಿ 1896.

ಇದರಿಂದ ಸಕಲ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸ್ ೧೮೭೮ನೇ ಇಸವಿ ಜೂಲೈ 8ನೇ ತಾರೀಖಿನ ಫಾರೆಸ್ಟ್ ರೂಲ್ಸು 13ನೇ ಸೆಕ್ಷನ್ ಅನುಸರಿಸಿ, ಈ ಕೆಳಗೆ ನಮೂದಿರುವ ಸ್ಟೇಟು ಮತ್ತು ರಿಜರ್ವ್ ಫಾರೆಸ್ಟುಗಳು ಮತ್ತು ಪ್ಯಾರ್ಟಿಕೇರ್ಸಗಳು 1896ನೇ ಇಸವಿ ಫಿಬ್ರವರಿ 1ರ ಲಾಗಾಯಿತು 1896ನೇ ಇಸವಿ ಮೇ ಆಖೈರುವರೆಗೆ ಬಿಸಲು ಕಾಲದಲ್ಲಿ ಜನಗಳಿಗೆ ಬಂದು ಮಾಡಲ್ಪಟ್ಟಿರುತ್ತೆ.

2. ಈ ಮೇಲ್ಕಂಡ ಕಾಲದಲ್ಲಿ ಯಾವ ವಿಧವಾದ ಶಿಕಾರಿಯೂ ನಿರೋಧಿಸಲ್ಪಟ್ಟಿದೆ. ಅತಿಕ್ರಮ ಪ್ರವೇಶ ಮಾಡುವವರು ಪೀನಲ್ ಕ್ಯೋರ್ಡಿಗೆ ಗುರಿಯಾದಾರು.

ನಂಬರ್.	ಸ್ಟೇಟು ಮತ್ತು ರಿಜರ್ವ್ ಫಾರೆಸ್ಟುಗಳು ಮತ್ತು ಪ್ಯಾರ್ಟಿಕೇರ್ಸಗಳ ಹೆಸರು.	ತಾಲ್ಲೂಕು.
	I ಫಾರೆಸ್ಟುಗಳು.	
1	ನಂದೀದುರ್ಗ	ಚಿಕ್ಕಬಳ್ಳಾಪುರ
2	ನರಸಿಹ್ಮದೇವರ ಬೆಟ್ಟ	ಡಿಟೋ, ಗೌರೀಬಿದನೂರು ಮತ್ತು ಗುಡಿಬಂಡೆ ಸಬ್ ತಾಲ್ಲೂಕು
3	ಕಾಮಸಂದ್ರಜಂಗಲ್ ಮತ್ತು ಅದರಲ್ಲಿರುವ ಪ್ಯಾರ್ಟಿಕೇರ್ಸಗಳು	ಬೌರಿಂಗ್‌ಪೇಟೆ ಮತ್ತು ಮಾಲೂರು
4	ರಾಯಲ್‌ಪಾಡು, ಅಡ್ಡಗಲ್ಲು, ನೆಲವಂಕಿ ಜಂಗಲ್‌ಗಳು ಮತ್ತು ಅವುಗಳಲ್ಲಿರುವ ಪ್ಯಾರ್ಟಿಕೇರ್ಸಗಳು	ಚಿಂತಾಮಣಿ ಮತ್ತು ಶ್ರೀನಿವಾಸಪುರ ಸಬ್ ತಾಲ್ಲೂಕು
5	ಶ್ರೀನಿವಾಸಪುರ ಯೆಲ್ಲೂರು ಜಂಗಲ್ ಮತ್ತು ಅವುಗಳಲ್ಲಿರುವ ಪ್ಯಾರ್ಟಿಕೇರ್ಸಗಳು	ಶ್ರೀನಿವಾಸಪುರ ಸಬ್ ತಾಲ್ಲೂಕು ಮತ್ತು ಮುಳಬಾಗಲು
6	ಅಗರದ ಜಂಗಲ್	ಮುಳಬಾಗಲು
7	ಹೊಸೂರು, ಅಣಜಗಾನಹಳ್ಳಿ, ಪಾಳ್ಯೇಗಾರ್ ಪೊದೆ	ಶ್ರೀನಿವಾಸಪುರ ಸಬ್ ತಾಲ್ಲೂಕು
8	ಇಟಿಕಲ್ ದುರ್ಗ ಫಾರೆಸ್ಟು	ಬಾಗೇಪಲ್ಲಿ
9	ಪಲಸೆ ಫಾರೆಸ್ಟು	ಗೌರೀಬಿದನೂರು
10	ಗೆದರೆಬೆಟ್ಟ ಮತ್ತು ಯೆಮ್ಮಗುಟ್ಟು ಜಂಗಲ್‌ಗಳು (ಸಂದಲ್‌ಪೇರಾವಾಗಿರತಕ್ಕ ಪ್ರದೇಶಮಾತ್ರವೆ)	ಡಿಟೋ
	II ಪ್ಯಾರ್ಟಿಕೇರ್ಸಗಳು.	
11	ನಂದಿ	ಚಿಕ್ಕಬಳ್ಳಾಪುರ
12	ಸುಲಾಲಪ್ಪನ ದಿನ್ನೆ	ಡಿಟೋ
13	ಗಾಜಲ ದಿನ್ನೆ	ಕೋಲಾರ
14	ಸಂಗಂಡನಹಳ್ಳಿ	ಡಿಟೋ
15	ಮಾಲೂರು	ಮಾಲೂರು
16	ಬೀಚಗಾನಹಳ್ಳಿ	ಗುಡಿಬಂಡೆ ಸಬ್ ತಾಲ್ಲೂಕು
17		ಶಿಡ್ಲಘಟ್ಟ
18	ತಿರುಮಲಯ್ಯನ ದಿನ್ನೆ	ಡಿಟೋ
19	ಚವುಡಸಂದ್ರ	ಡಿಟೋ
20	ಗೌರೆಮ್ಮಡುಗು	ಡಿಟೋ
21	ಯಲ್ಲಂಪಲ್ಲಿ	ಬಾಗೇಪಲ್ಲಿ

ಬಿ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್.